ಜಿಲುಪುತ್ತಿತ್ತು. ಆಗ ಇದ್ದಕ್ಕಿದ್ದಂತೆ ಕಾಣಿಸಿಕೊಂಡ ಹುಡುಸ್ಲೇಗೌಡನ ಕೈಯ್ಯಾಳು ದೊಡ್ಡಿಂಗ, 'ಈಗಿಂದೀಗ್ಲೇ ಮಂತಾಕೆ ಬರ್ಬೇಕಂತೆ ಹಂಗಂತ ಗೌಡ್ರು ಹೇಳಿ ಕಳ್ಸವ್ರೆ, ವತಾರ್ನಿಂದ ನಾಲ್ಕೈದ್ ಸಾರ್ತಿ ಮಂತಾಕೋಗಿದ್ದೆ ತಗುದ್ಬಾಗ್ಲು ತಗ್ದಂಗೇ ಇತ್ತು, ಅಲ್ಲೇ ಎಲ್ಲೋ ತ್ವಾಟ್ದೋಳೀಕೆ ವೋಗಿರ್ತೀರಾ ಅಂತ ಕಾದ್ಮಕ್ಕೇ ಕಾದು ವಾಪಸ್ ಬಂದುದ್ದೆ,' ಅಡವಪ್ಪನ ವಾರಾಸಿಗೆ ನಡೆಯುತ್ತಲೇ ಅಂದ. ಅದನ್ನು ಕೇಳಿಸಿಕೊಳ್ಳದವನಂತೆ ನಡೆದ ಅಡವಪ್ಪ ಮನೆಯನ್ನು ತಲುಪುತ್ತಲೇ ನಿತ್ರಾಣಗೊಂಡು ಹಾರೊಡೆದಿದ್ದ ಬಾಗಿಲಿನಿಂದ ತಟ್ಟಾಡಿಕೊಂಡು ಒಳಹೊಕ್ಕು ಪಡಸಾಲೆಯಲ್ಲಿದ್ದ ಕುರ್ಚಿಯಲ್ಲಿ ಕುಸಿದ. ಆಗ ಮನೆಯೊಳಗಿಂದ ಭಯಗ್ರಸ್ಥ ನಾಯಿಯೊಂದು ಬುದೂರನೆ ಪಡಸಾಲೆಯಲ್ಲಿ ನುಗ್ಗಿ ತಲ್ಬಾಗಿಲನ್ನು ತಟಾಯ್ದು ತೋಟದೊಳಕ್ಕೆ ದೌಡಾಕಿತು. ಅದನ್ನೇ ದಿಟ್ಟಿಸಿದ ಅಡವಪ್ಪ, 'ನನ್ ಪಾಡೂ ನಾಯಿ ಪಾಡಾಗೋಯ್ತು,' ಅಂದುಕೊಳ್ಳುತ್ತಲೇ ಕಣ್ಣೀರು ಕಪಾಳದಿಂದ ಕೆಳಗಿಳಿಯತೊಡಗಿತು. ಹೊನ್ನಟ್ಟಾಲಯ್ಯನಿಗೂ ಕರುಳು ಕಿವುಚಿದಂತಾಗಿ ಕಣ್ಣುಗಳು ತುಂಬಿಕೊಂಡವು. ನಂತರ ರವೋಟು ಉಸುರುಯ್ಕಂಡ ಅಡವಪ್ಪ, 'ಇವತ್ಗೆ ನನ್ನ ಅವ್ವ ಸಂಬಂಧ ಕಲಾಸಾತು. ನನ್ ಪಾಲ್ಗೆ ಅವ್ವ ಸತ್ತ. ಇನ್ಯಾಕೆ ಅವ್ವ ಯಾರೋ ನಾನು ಯಾರೋ. ನನ್ನ ಆಸ್ತೀನೆಲ್ಲಾ ಜಡ್ದು ಯಾರ್ಗಾರಾ ಬರ್ದು ಬಿಸಾಕ್ತೀನಿ. ಒಂದ್ ಅಂಗೈಯಗ್ಲ ಅವ್ನಿಗೆ ಸಿಗ್ಬಾರ್ದು ಹಂಗ್ ಮಾಡ್ತೀನಿ. ಅದೇನ್ ಕಿತ್ಕಾತಾನೋ ಕಿತ್ಕಳ್ಲಿ,' ಅಂದುಕೊಂಡು ಮೂಗುಬ್ಬಸದಿಂದ ಬುಸುಗುಟ್ಟತೊಡಗಿದ. ಬೆವರ ಹನಿಗಳು ಮೈ ತುಂಬಾ ಹರಳುಗಟ್ಟಿದವು. ಹೊನ್ನಟ್ಟಾಲಯ್ಯ ಗೆಣೆಕಾರನ ವೇದನೆಯನ್ನು ನೋಡದವನಾಗಿ, 'ಅಯ್ಯೋ ಅದೇನೇನ್ ಆಗ್ಬೇಕೋ ಅದಾಗುತ್ತೆ ಅದುನ್ಯಾರೂ ತಪ್ಸಾಕಾಗಲ್ಲ, ಈಗ ರವೋಟು ತಮ್ಣ ಮಾಡ್ಕಾ, ಅಮಕಾವ ನೋಡ್ಕಂಡ್ರಾತು ಏನ್ಮಾಡ್ಬೇಕು ಅಂತಾವಾ,' ಅನ್ನುತ್ತಾ ಅಡವಪ್ಪನ ಎದುರಿಗೆ ಕುಕ್ಕುರುಗಾಲಲ್ಲಿ ಕೂತ. 'ಅವ್ವ ಇಲ್ಲುದ್ ತಬ್ಲೀಂತ ಸದ್ರ ಕೊಟ್ಟೆ ನೋಡು, ಅದೇ ನಾನು ಮಾಡಿದ್ ದೊಡ್ಡ ತಪ್ಪು. ನಾನ್ ಮಾಡಿದ್ದು ನಂಗೇ ತಿರುಗ್ಮಂತ್ರ ಆಗೋತು. ಅದೆಂಗೆ ಮನೆ ಉತ್ರಾಸ ತುಳಿತಾನೆ ನಾನೂ ನೋಡ್ತೀನಿ,' ಅಂದುಕೊಂಡವನೇ ಎದ್ದು ನಡುಮನೆಗೋಗಿ ಮಂಚದ ಮೇಲೆ ಮೈ ಚೆಲ್ಲಿದ. ಹೊನ್ನಟ್ಟಾಲಯ್ಯನಿಗೆ ತನ್ನಾವ ಮಾತುಗಳೂ ಅವನೊಳಗಿನ ತಲ್ಲಣವನ್ನು ತಮಣೆ ಮಾಡಲಾರವು ಅನಿಸಿ ಪಡಸಾಲೆಯಿಂದಲೇ ನಡುಮನೆಯ ಗೋಡೆಯಲ್ಲಿ ನೇತಾಕಿದ್ದ ಶಂಭುಲಿಂಗ ಮಗುವಾಗಿದ್ದಾಗ ಅದರವ್ವ ಅವುಚಿಕೊಂಡಿದ್ದ ಪಟವನ್ನೇ ಕಣ್ತುಂಬಿಕೊಳ್ಳತೊಡಗಿದ. ಮೌನ ಹುತ್ತಗಟ್ಟಿದ್ದ ತಾವಿನಲ್ಲಿ ಭಾವಗಳು ಉಸಿರುಗಟ್ಟಿ ಜ್ವಾಲೆಯಾಗಿ ಯಾವ ಚಣದಲ್ಲಾದರೂ ಜಗ್ಗಂದೀತೆಂಬಂಥ ಕಾವು ಮಡುಗಟ್ಟುತ್ತಿರುವಾಗ ದಿಢೀರನೆ ಮೇಲೆದ್ದು ಬೀರಿನ ಬಾಗಿಲು ತೆಗೆದು ಅದರೊಳಗಿಂದ ಹೆಂಡತಿಯ ಒಡವೆಗಳನ್ನೂ ಕಲಾಪತ್ತಿನ ಸೀರೆಗಳನ್ನೂ ಜಮೀನಿನ ಪತ್ರಗಳನ್ನೂ ಕೈ ಚೀಲವೊಂದಕ್ಕೆ ತುರುಕಿಕೊಂಡು ಅಲ್ಲಿಂದ ಪಡಸಾಲೆಗೆ ನಡೆದ ಅಡವಪ್ಪನಿಗೆ ಹೊಳೆಯ ಬಾಗಿಲನ್ನು ದಾಟಿ ಅಂಗಳಕ್ಕೆ ಕಾಲಿಡುತ್ತಿದ್ದ ಶಂಭುಲಿಂಗ ಹಾಗೂ ಮುಬೀನಾ ಕಂಡರು.

**ಎಸ್. ಗಂಗಾಧರಯ್ಯ**

ಇಂಗ್ಲಿಷ್ ಅಧ್ಯಾಪಕ, ಕತೆಗಾರ, ಅನುವಾದಕ ಗಂಗಾಧರಯ್ಯ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮಾಕುವಳ್ಳಿಯವರು. 'ನವಿಲ ನೆಲ', 'ಒಂದು ಉದ್ದನೆಯ ನೆರಳು', 'ದೇವರ ಕುದುರೆ' ಅವರ ಪ್ರಕಟಿತ ಕಥಾಸಂಗ್ರಹಗಳು. ಅನೇಕ ಕೃತಿಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ತಿಪಟೂರಿನಲ್ಲಿ ವಾಸ.